ಶ್ರೀ ಎಂ. ಎಂ. ನಾಣಯ್ಯ.--ಗೇಣೀದಾರರು ಕಾನೂನು ಉಲ್ಲಂಘನೆ ಮಾಡಿದ್ದರೆ ಅವರಿಗೆ ಶಿಕ್ಷೆ ಮಾಡಿ ಅದರೆ ಗೇಣೀದಾರರ ಷರತ್ತನ್ನು ರಜಾ ಮಾಡಬೇಕಾದರೆ ಆವರನ್ನು ಕನ್‌ಸಲ್ಟ್ ಮಾಡಿ ಮಾಡ ಬೇಕೇಹೊರತು ಏಕಪಕ್ಷೀಯವಾಗಿ ಮಾಡಬೇಡಿ. ಸಬ್-ಲೀಸ್ ಮಾಡಿದ್ದಾರೋ ಆಂಥವರ ಮೇಲೆ ಬೇಕಾ ದರೆ ಕ್ರಮ ತೆಗೆದುಕೊಂಡು ಉಳಿದವರನ್ನು ಕೈ ಬಿಡಿ.

(ಉತ್ತರವಿಲ್ಲ.)

ಶ್ರೀ ಬಿ. ಎಸ್ ಯಡಿಯೂರಪ್ಪ --ದರಖಾಸ್ತು ನೂಲಕ ಜಮೀನುಗಳನ್ನು ಕೊಟ್ಟು 18-20 ವರ್ಷಗಳಾಗಿರುವ ಕಡೆ ಹುಣಸೆ ಮರಗಳನ್ನು ಹರಾಜು ಮಾಡುತ್ತಿದ್ದಾರೆ. ದರಖಾಸ್ತು ಕೊಡುವುದಕ್ಕಿಂತ ಮುಂಚೆ ಹುಣಸೆ ಮರಗಳು ಇರಲಿಲ್ಲ. ರೈತ ಬಂದು ಬೆಳೆಸಿ ಅದನ್ನು ಕಾಯುತ್ತಿದ್ದಾನೆ ಆದರೆ ಅರಣ್ಯ ಇಲಾಖೆಯವರು ಹರಾಜು ಮಾಡುತ್ತಿದ್ದಾರೆ. ಶಿವಮೊಗ್ಗ ಜಿಲ್ಲೆಯಲ್ಲಿ ಇದು ನಡೆಯುತ್ತಿದ್ದು ರೈತರು ತಬ್ಬಲಿಯಾಗುತ್ತಿದ್ದಾರೆ. ಆದ್ದರಿಂದ ಈ ರೈತರಿಗೆ ರಕ್ಷಣೆ ಮಾಡುವುದಕ್ಕೆ ಸೂಕ್ತ ಆದೇಶ ನೀಡುತ್ತೀರಾ ?

ಶ್ರೀ ಬಿ ಎ. ಜೀವಿಜಯ.--ಇದು ಏಲಕ್ಕಿ ಗಿಡೆದ ವಿಷಯ. ಅವರು ಕೇಳುತ್ತಿರುವುದು ಹುಣಸೆ ಮರದ ವಿಷಯ. ಇದಕ್ಕೂ ಅದಕ್ಕೂ ಸಂಬಂಧವಿಲ್ಲ

ಶ್ರೀ ಬಿ. ಎಸ್. ಯಡಿಯೂರಪ್ಪ.--ಹಾಗಾದರೆ ಕ್ಷಮಿಸಿ.

ಹೊಸಪೇಟೆ ಮತ್ತು ಕೊಟ್ಟೂರಿನ ನಡುವೆ ಇರುವ ರೈಲ್ವೆ ಸಂಪರ್ಕವನ್ನು ಹರಿಹರ ದವರೆಗೂ ವಿಸ್ತರಿಸುವ ಬಗ್ಗೆ.

274 (571) ಶ್ರೀ ಬಿ. ಹೆಚ್. ಯಂಕಾನಾಯಕ (ಹಪರನಹಳ್ಳಿ) ಹಾಗೂ ಶ್ರೀ ಕೆ. ಚಿನ್ನಬಸವನಗೌಡ (ಕೂಡ್ಲಿಗಿ) ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಹೊಸಪೇಟೆ ಮತ್ತು ಕೊಟ್ಟೂರಿನ ನಡುವಿನ ರೈಲ್ವೆ ಸಂಪರ್ಕವನ್ನು ಹರಿಹರದ ವರವಿಗೂ ವಿಸ್ತರಿಸಲು, ರಾಜ್ಯ ಸರ್ಕಾರ ಕೇಂದ್ರ ಸರ್ಕಾರವನ್ನೇನಾದರು ಒತ್ತಾಯಿಸಿದೆಯೇ ?

ಆ) ಹಾಗಿದ್ದರೆ ಅದರಿಂದಾಗಿರುವ ಫಲಿತಾಂಶವೇನು ;

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು.

ಆ) ಕೇಂದ್ರ ಸರ್ಕಾರ ಈ ಪ್ರಸ್ತಾಪನೆಯನ್ನು ಮುಂದೂಡಿದೆ.

ಶ್ರೀ ಎಂ. ಎಸ್. ಕೃಷ್ಣಸ್.--ಬರೀ ಲೈಲ್ವೆ ಬಿಡುತ್ತಿರಬೇಕಾದರೆ ರೈಲು ಏತಕ್ಕೆ ಹಾಕಬೇಕು.

ಎಚ್. ಡಿ. ದೇವೇಗೌಡ.—ಈ ವಿಚಾರದಲ್ಲಿ ನಾವು ಕೇಂದ್ರ ಸರ್ಕಾರದ ಜೊತೆ ಸಾಕಷ್ಟು ಸಮಾ ಲೋಚನೆಮಾಡಿದ್ದೇವೆ. 1970-71 ರಿಂದಲೂ ಈ ಬಗ್ಗೆ ಬೇಡಿಕೆ ಇದೆ. ನಮಗೆ ಬಂದಿರುವ ವರದಿ ಪ್ರಕಾರ ಅದಕ್ಕೆ 28 ಕೋಟಿ ರೂಪಾಯಿಗಳು ಖರ್ಚಾಗುತ್ತದೆ ಎಂದು ಗೊತ್ತಾಗಿದೆ ಹಾಲಿ ಕೈಗೆತ್ತಿಕೊಂಡು ಕೆಲಸ ಮಾಡುತ್ತಿರತಕ್ಕ ರೈಲು ನಾರ್ಗಗಳ ನಿರ್ಮಾಣದ ಕೆಲಸ 40 ಇದ್ದು ಅದಕ್ಕೆ 900 ಕೋಟಿ ರೂಪಾಯಿಗಳು ಬೇಕಾಗುತ್ತದೆ ಆದ್ದರಿಂದ ಈ ಕೆಲಸವನ್ನು ಸದ್ಯಕ್ಕೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಎಂದು ತಾತ್ಕಾಲಿಕ ವಾಗಿ ಡಿಫರ್ ಮಾಡತಕ್ಕ ನಿರ್ಣಯವನ್ನು ಕೇಂದ್ರ ಸರ್ಕಾರದವರು ಮಾದಿದ್ದಾರೆ. ರೈಲ್ವೆ ಇಲಾಖೆಯಿಂದ ನಮಗೆ ಈ ರೀತಿ ತಿಳಿಸಿದ್ದಾರೆ.

ಶ್ರೀ ಕೆ. ಚಿನ್ನಬಸವನಗೌಡ.—ಆ ಭಾಗ ಹಿಂದುಳಿದ ಪ್ರದೇಶ. ಕೊಟ್ಟೂರಿನಿಂದ ಹರಿಹರದವರೆಗೆ ರೈಲು ಮಾರ್ಗವನ್ನು ವಿಸ್ತರಿಸಿದರೆ ವ್ಯಾಪಾರಕ್ಕೆ ಅನುಕೂಲವಾಗುತ್ತದೆ. ಜೊತೆಗೆ ಶಿವಮೊಗ್ಗ ಭಾಗಕ್ಕೆ ಸಂಪರ್ಕ ಸಿಗುತ್ತದೆ 30 ವರ್ಷದಿಂದ ಇದನ್ನು ಹೇಳುತ್ತಿದ್ದರೂ ಸರ್ಕಾರದವರು ಹೀಗೇ ಹೇಳಿಕೊಂಡು ಬರುತ್ತಿದ್ದಾರೆ ಯಾವ ಕಾರಣದಿಂದ ಈ ಕೆಲಸನ್ನು ಮುಂದೂಡಿದ್ದಾರೆ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳುತ್ತಾರೆಯೇ ? ಮತ್ತು ಸರ್ಕಾರ ಈ ಬಗ್ಗೆ ಕೇಂದ್ರ ರೈಲ್ವೆ ಇಲಾಖೆಗೆ ಒತ್ತಾಯ ಮಾಡಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಬಂದೊಂದು ಸಾರಿ ನಮ್ಮ ರಾಜ್ಯಕ್ಕೆ ಎಷ್ಟು ನ್ಯಾಯ ಸಿಗಬೇಕೋ ಅದು ಸಿಗುತ್ತಿಲ್ಲ. ಇದು ಸತ್ಯವಾದ ಮಾತು ಸನ್ಮಾನ್ಯ ಸದಸ್ಯರು ಹೇಳುವುದರಲ್ಲಿ ಸತ್ಯಾಂಶ ಇದೆ. ರೈಲ್ವೆ ಮಾರ್ಗಗಳ ವಿಸ್ತರಣೆಯಲ್ಲಿ ಬೇರೆ ರಾಜ್ಯಕ್ಕೆ ಹೋಲಿಸಿದರೆ ಕರ್ನಾಟಕಕ್ಕೆ ಸಾಕಷ್ಟು ಪ್ರಾತಿನಿಧ್ಯ ಸಿಕ್ಕಿಲ್ಲ. ನಮ್ಮ ಕರ್ನಾಟಕದಿಂದ ಅನೇಕ ಜನ ರೈಲ್ವೆ ಮಂತ್ರಿಗಳು ಆಗಿ ಹೋಗಿದ್ದಾರೆ. ಈಗಲೂ ಯುವಕರೇ ಕೇಂದ್ರದಲ್ಲಿ ನಮ್ಮ ರಾಜ್ಯದಿಂದ ರೈಲ್ವೆ ಮಂತ್ರಿಗಳಾಗಿದ್ದಾರೆ. ಅವರ ಗಮನ ಸೆಳೆಯುವುದಕ್ಕೆ ನಾನು

ಪ್ರಯತ್ನ ಮಾಡಿ ಒತ್ತಾಯ ಮಾಡುತ್ತೇನೆ. ನಾನು ಆಶಿಸುತ್ತೇನೆ, 7ನೇ ಪಂಚವಾರ್ಷಿಕ ಯೋಜನೆಯಲ್ಲಿ ಇದನ್ನು ಸೇರಿಸುವುದಕ್ಕೆ ಪ್ರಯತ್ನ ಮಾಡಬಹುದು ಎಂದು. ಈ ರೈಲ್ವೆ ಮಾರ್ಗದ ಬಗ್ಗೆ ನನ್ನ ಶಕ್ತಿ ಮೀರಿ ಒತ್ತಾಯ ಮಾಡುತ್ತೇನೆ. ಕೊಟ್ಟೂರು ನಡುವಿನ ರೈಲು ಮಾರ್ಗವನ್ನು ಹರಿಹರದವರೆಗೂ ವಿಸ್ತರಿಸುವ ಕೆಲಸ ಏನಿದೆ ಇದು ಬಹಳ ಅವಶ್ಯಕವಾದುದು ಎಂದು ನಾನು ತಿಳಿದುಕೊಂಡಿದ್ದೇನೆ. ನಾನು ಈ ವಿಷಯ ಬಲ್ಲಿ ಶಕ್ತಿ ಮೀರಿ ಒತ್ತಾಯ ಮಾಡಬಹುದೇ ಹೊರತು ನನಗೆ ಬೇರೇನೂ ಶಕ್ತಿ ಇಲ್ಲ.

ಶ್ರಿ ಎಂ. ಎಸ್. ಕೃಷ್ಣನ್.—900 ಕೋಟಿ ರೂಪಾಯಿ ಖರ್ಚಾಗುತ್ತದೆಂದು ಏನು ಹೇಳಿದ್ದಾರೋ ಅದು ಆನ್ ಗೋಯಿಂಗ್ ಕೆಲಸಗಳಿಗೆ. ಈ ರೈಲು ಮಾರ್ಗ ಏನಿದೆ ಇದು ಬಹಳ ಮುಖ್ಯವಾದುದು. ನಾನ್ಯ ದೇವೇಗೌಡರು ವಿರೋಧ ಪಕ್ಷದಲ್ಲಿ ಕುಳಿತಿದ್ದಾಗ ಇದರ ಬಗ್ಗೆ ಬಹಳ ಬಲವಾಗಿ ಮಾತನಾಡುತ್ತಿದ್ದರು. ಆದರೆ ಆ ಕಡೆ ಕುಳಿತನಂತರ ಏತಕ್ಕೆ ಮೌನವಾಗಿದ್ದಾರೋ ಗೊತ್ತಾಗುತ್ತಿಲ್ಲ.

ಶ್ರೀ ಎಚ್. ಡಿ ದೇವೇಗೌಡ.—ನನಗಿರುವ ತೂಕ ಎಲ್ಲಾ ಸೇರಿಸಿ ಒತ್ತಾಯಮಾಡುತ್ತೇನೆ.

ಶ್ರೀ ಎಂ. ಮಹದೇವ್.—ಕೊಟ್ಟೂರು, ಹರಿಹರ ರೈಲು ಮಾರ್ಗದ ಬಗ್ಗೆ ಕೇಂದ್ರ ಸರ್ಕಾರದ ಬಗ್ಗೆ ರೈಲ್ವೆ ಇಲಾಖೆಯಿಂದ 8 ಕೋಟಿ ರೂಪಾಯಿ ಖರ್ಚಾಗುತ್ತದೆಂದು ಪತ್ರ ಬಂದಿದೆ. ಅತೀ ಸುಲಭವಾದ ರೈಲ್ವೆ ಮಾರ್ಗ ಅಂದರೆ ಕೊಟ್ಟೂರು ರೈಲು ಮಾರ್ಗ ಈ ಬಗ್ಗೆ ನಮ್ಮ ರಾಜ್ಯಪಾಲರು ಒತ್ತಾಯ ಮಾಡಿದರೆ ನಿಜವಾಗಿಯೂ ಆಗುತ್ತದೆ. ರೈಲ್ವೆ ಕ್ಷೇತ್ರದಲ್ಲಿ ತಮಿಳುನಾಡಿನವರು ಹೆಚ್ಚು ಇರುವುದರಿಂದ ಅವರಿಗೆ ಹೋಗಬತಕ್ಕ ರಾಯಲಿಟಿ ಕಡಿಮೆಯಾಗುತ್ತದೆ ಎಂದು ಇದರ ಬಗ್ಗೆ ತಪ್ಪು ಕಲ್ಪನೆ ಕೊಡುತ್ತಿದ್ದಾರೆ. ಆದುದರಿಂದ, ಸರ್ಕಾರದವರು ಇದರ ಬಗ್ಗೆ ಪರಿಶೀಲನೆ ನೂಡಿ ಆದಷ್ಟು ತೀವ್ರವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—28 ಕೋಟಿ ರೂಪಾಯಿ ಅದರ ಕಾಸ್ಟ್ ಆಗುತ್ತದೆಂದು ಹೇಳಿದ್ದಾರೆ. ನಾನ್ಯ ಸದಸ್ಯರು 8 ಕೋಟಿ ರೂಪಾಯಿ ಹೇಳುತ್ತಿದ್ದಾರೆ. ಅವರು ಯಾವ ಅಧಾರದ ಮೇಲೆ ಹೇಳುತ್ತಿದ್ದಾರೋ ನನಗೆ ಗೊತ್ತಾಗುತ್ತಿಲ್ಲ. ನನಗೆ ಬಂದಿರತಕ್ಕ ವರದಿ ಪ್ರಕಾರ ಹೇಳುವುದಾದರೆ 28 ಕೋಟಿ ರೂಪಾಯಿ ಎಂದು ತಿಳಿದುಬಂದಿದೆ. ಹರಿಹರ ಕೊಟ್ಟೂರು ರೈಲ್ವೆ ರಸ್ತೆ ನಿರ್ಮಾಣ ಅತ್ಯಂತ ಅವಶ್ಯಕ. ರಾಜ್ಯದ ದೃಷ್ಟಿಯಿಂದ ಆದರ ಬಗ್ಗೆ ಹೆಚ್ಚು ಒತ್ತಾಯ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಸಂಬಂಧಪಟ್ಟ ಮಂತ್ರಿಗಳನ್ನು ಭೇಟಿ ಮಾಡಿ ಒತ್ತಾಯ ಮಾಡಲಿಕ್ಕೆ. ಮುಖ್ಯ ಮಂತ್ರಿಗಳನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು —ವಿಂಟರ್ ಗೇಜ್‌ನ ರೈಲ್ವೆ ಸ್ಲೀಪರ್ಸ್‌ಗಳನ್ನು ಇಲ್ಲಿಗೆ ಉಪಯೋಗ ಮಾಡಿಕೊಂಡರೆ ಕಾಸ್ಟ್ ಕಡಿಮೆಯಾಗುತ್ತದೆ. ಅದರ ಬಗ್ಗೆ ಪರಿಶೀಲನೆ ಮಾಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಇನ್ನೂ ಸರ್ವೆ ಮಾಡತಕ್ಕ ಹಂತದಲ್ಲಿದೆ ಎಂದು ತಿಳಿದುಕೊಂಡಿದ್ದೇನೆ. ವಿಂಟರ್‌ಗೇಜ್ ಸ್ಲೀಪರ್ಸ್ ತೆಗೆದು ಇಲ್ಲಿಗೆ ಹಾಕಲಿಕ್ಕೆ ಪ್ರಯತ್ನ ಮಾಡುತ್ತೀರಾ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ, ಆ ಪ್ರಯತ್ನ ಮಾಡೋಣ.

ನಂಜನಗೂಡಿನಲ್ಲಿ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ ಹೆಣ್ಣು ಮಕ್ಕಳ ವಿದ್ಯಾರ್ಥಿ ನಿಲಯವನ್ನು ಕಟ್ಟುವ ಬಗ್ಗೆ.

ಶ್ರೀ ಎಂ. ಮಹದೇವ್.—(ನಂಜನಗೂಡು) ಕ್ರಮ ಸಂಖ್ಯೆ 275 (887) ಸಮಾಜ ಕಲ್ಯಾಣ ಮಂತ್ರಿಯವರು ದಯವಿಟ್ಟು ಇದಕ್ಕೆ ಉತ್ತರಿಸುವರೇ ?

ಅ) 1983-84ನೇ ಸಾಲಿನಲ್ಲಿ ನಂಜನಗೂಡಿನಲ್ಲಿ ಒಂದು ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದ ಬಾಲಕಿಯರ ವಿದ್ಯಾರ್ಥಿ ನಿಲಯ ಮಂಜೂರು ಮಾಡಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಈ ವಿದ್ಯಾರ್ಥಿ ನಿಯನುಕ್ಕೆ ಕಟ್ಟಡ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆಯೇ ?

ಇ) ಇಲ್ಲದಿದ್ದರೆ, ಕಾರಣಗಳೇನು ?

ಶ್ರೀಮತಿ ಚಂದ್ರಪ್ರಭಾ ಅರಸ್ (ಸಮಾಜ ಕಲ್ಯಾಣ ಸುತ್ತು ರೇಷ್ಮೆ ಸಚಿವರು).—ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಈಗಾಗಲೇ ಒಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಬಾಲಕಿಯರ ವಿದ್ಯಾರ್ಥಿ ನಿಲಯ ನಂಜನಗೂಡಿನಲ್ಲಿ ಸರ್ಕಾರಿ ಕಟ್ಟಡದಲ್ಲಿ ನಡೆಯುತ್ತಿದೆ.

ಶ್ರೀ ಎಂ. ಮಹದೇವ್.—ನಂಜಗೂಡಿನಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಬಾಲಕಿಯರ ವಿದ್ಯಾರ್ಥಿ